# ಡಾ. ಶೈಲೇಶಗೆ ಅತ್ಯುತ್ತಮ ಸಂಶೋಧನಾ ಪ್ರಕಟಣೆ ಪ್ರಶಸ್ತಿ

**ಹಳಿಯಾಳ:** ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯು (ವಿಜಿಎಸ್‌ಟಿ) ಸಂಶೋಧನಾ ವಿಭಾಗದಲ್ಲಿ ಸಾಧನೆಗೈದ ಹಳಿಯಾಳದ ಕೆಎಲ್‌ಎಸ್ ವಿಡಿಐಟಿಯ ಡಾ. ಶೈಲೇಶ ಚನ್ನಪಟ್ಟಣ ಅವರಿಗೆ



ಅತ್ಯುತ್ತಮ ಸಂಶೋಧನಾ ಪ್ರಕಟಣೆ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಶೈಲೇಶ ಅವರು ಐಸಿ ಇಂಜಿನ್‌ಗಳಲ್ಲಿ ಜೈವಿಕ ಡೀಸೆಲ್ ಜತೆ ನ್ಯಾನೊ ಪಾರ್ಟಿಕಲ್ ಬಳಕೆ, ಶೀತಲೀಕರಣ ಹಾಗೂ ಹವಾ ನಿಯಂತ್ರಣ ಘಟಕಗಳಲ್ಲಿ ನವೀಕರಿಸಲಾಗುವ ಸಂಪನ್ಮೂಲಗಳ ಸಮರ್ಪಕ ಬಳಕೆ, ಎಲೆಕ್ಟ್ರಾನಿಕ್ ಉಪಕರಣಗಳನ್ನು ತಂಪಾಗಿಸುವ ವ್ಯವಸ್ಥೆ ಕುರಿತಾದ ವಿಷಯಗಳಲ್ಲಿ ಸಂಶೋಧನೆ ಮಾಡಿದ್ದಾರೆ. ಅಲ್ಲದೆ, 14 ಪೇಟೆಂಟ್ ಪ್ರಕಟಣೆಗಳನ್ನು ಹೊಂದಿದ್ದಾರೆ. ಡಾ. ಶೈಲೇಶ ಚನ್ನಪಟ್ಟಣ ಅವರ ಸಾಧನೆಯನ್ನು ಗುರುತಿಸಿ ರಾಜ್ಯ ಸರ್ಕಾರ ಪುರಸ್ಕರಿಸಿರುವುದು ಸಂತಸ ತಂದಿದೆ ಎಂದು ಆಡಳಿತ ಮಂಡಳಿಯ ಅಧ್ಯಕ್ಷ ವಿನಾಯಕ ಲೋಕುರ್ ತಿಳಿಸಿದ್ದಾರೆ ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಶೋಧನಾ ಪುರಸ್ಕಾರ

ಧಾರವಾಡ,ಜ.16:ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ವಿ ಜಿ ಎಸ್ ಟಿ ) ಯು ಸಂಶೋಧನಾ ವಿಭಾಗದಲ್ಲಿ ಸಾಧನೆಗೈದ ಕೆಎಲ್ಎಸ್ ವಿಡಿಐಟಿ ಹಳಿಯಾಳದ ಡಾ. ಶೈಲೇಶ್ ಚನ್ನಪಟ್ಟಣ ಅವರಿಗೆ ರಾಜ್ಯ ಸರ್ಕಾರದ ವಿ ಜಿ ಎಸ್ ಟಿ ಯು ಮೆಕ್ಯಾನಿಕಲ್ ವಿಭಾಗದ ಅತ್ಯುತ್ತಮ ಸಂಶೋಧನಾ ಪ್ರಕಟಣೆ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಶೈಲೇಶ್ ಅವರು ಐ ಸಿ ಇಂಜಿನ್ ಗಳಲ್ಲಿ ಜೈವಿಕ ಡಿಸೇಲ್ ಜೊತೆ ನ್ಯಾನೊ ಪಾರ್ಟಿಕಲ್ ಬಳಕೆ , ಶೀತಲೀಕರಣ ಹಾಗೂ ಹವಾ ನಿಯಂತ್ರಣ ಘಟಕಗಳಲ್ಲಿ ನವೀಕರಿಸಿಲಾಗುವ ಸಂಪನ್ಮೂಲಗಳ ಸಮರ್ಪಕ ಬಳಕೆ, ಎಲೆಕ್ಟ್ರಾನಿಕ್ ಉಪಕರಣಗಳನ್ನು ತಂಪಾಗಿಸುವ ವ್ಯವಸ್ಥೆ ಕುರಿತಾದ ವಿಷಯುಗಳಲ್ಲಿ ಸಂಶೋಧನೆ ಗೈದಿದ್ದಾರೆ, 14 ಪೇಟೆಂಟ್ ಪ್ರಕಟಣೆಗಳನ್ನು ಹೊಂದಿದ್ದಾರೆ. ಆಡಳಿತ ಮಂಡಳಿಯ ಅಧ್ಯಕ್ಷ ವಿನಾಯಕ ಲೋಕುರ್ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಮುರುಗಯ್ಯ ಎಸ ಬಿ, ಸಂಶೋಧನಾ ಡೀನ್ ಡಾ. ಗುರುರಾಜ್ ಹತ್ತಿ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಡಾ. ಶೈಲೇಶ್ ಅವರಿಗೆ ಅಭಿನಂದಿಸಿದ್ದಾರೆ.



ಲೋಕಧ್ವನಿ

ಸಂಕ್ಷಿಪ್ತ ಲೋಕ

# ಡಾ. ಶೈಲೇಶ್ ಚನ್ನಪಟ್ಟಣರಿಗೆ ಸಂಶೋಧನಾ ಪುರಸ್ಕಾರ

**ಹಳಿಯಾಳ:** ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ವಿಜಿಎಸ್‌ಟಿ)ಯು ಸಂಶೋಧನಾ ವಿಭಾಗದಲ್ಲಿ ಸಾಧನೆಗೈದ ಕೆಎಲ್‌ಎಸ್‌ವಿಡಿಐಟಿ ಹಳಿಯಾಳದ ಡಾ. ಶೈಲೇಶ್ ಚನ್ನಪಟ್ಟಣ



ಅವರಿಗೆ ಪುರಸ್ಕರಿಸಿದೆ. ಮೆಕ್ಯಾನಿಕಲ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಶೈಲೇಶ್ ಚನ್ನಪಟ್ಟಣ ಅವರಿಗೆ ರಾಜ್ಯ ಸರ್ಕಾರದ ವಿಜಿಎಸ್‌ಟಿಯು ಮೆಕ್ಯಾನಿಕಲ್ ವಿಭಾಗದ ಅತ್ಯುತ್ತಮ ಸಂಶೋಧನಾ ಪ್ರಕಟಣೆ ಪ್ರಶಸ್ತಿ ನೀಡಿ ಪುರಸ್ಕರಿಸಿದೆ. ಶೈಲೇಶ್ ಅವರು ಐ ಸಿ ಎಂಜಿನ್‌ಗಳಲ್ಲಿ ಜೈವಿಕ ಡಿಸೇಲ್ ಜೊತೆ ನ್ಯಾನೊ ಪಾರ್ಟಿಕಲ್ ಬಳಕೆ, ಶೀತಲೀಕರಣ ಹಾಗೂ ಹವಾ ನಿಯಂತ್ರಣ ಘಟಕಗಳಲ್ಲಿ ನವೀಕರಿಸಿಲಾಗುವ ಸಂಪನ್ಮೂಲಗಳ ಸಮರ್ಪಕ ಬಳಕೆ, ಎಲೆಕ್ಟ್ರಾನಿಕ್ ಉಪಕರಣಗಳನ್ನು ತಂಪಾಗಿಸುವ ವ್ಯವಸ್ಥೆ ಕುರಿತಾದ ವಿಷಯಗಳಲ್ಲಿ ಸಂಶೋಧನೆ ಗೈದಿದ್ದಾರೆ. ಅಷ್ಟೇ ಅಲ್ಲದೆ 14 ಪೇಟೆಂಟ್ ಪ್ರಕಟಣೆಗಳನ್ನು ಹೊಂದಿದ್ದಾರೆ. ಡಾ. ಶೈಲೇಶ್ ಚನ್ನಪಟ್ಟಣ ಅವರ ಸಾಧನೆಯನ್ನು ಗುರುತಿಸಿ ರಾಜ್ಯ ಸರ್ಕಾರವು ಪುರಸ್ಕರಿಸಿರುವುದು ಸಂತಸ ತಂದಿದೆ ಎಂದು ಆಡಳಿತ ಮಂಡಳಿಯ ಅಧ್ಯಕ್ಷ ವಿನಾಯಕ ಲೋಕುರ್ ಹೇಳಿದ್ದಾರೆ. ಇವರ ಸಾಧನೆಗೆ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಮುರುಗಯ್ಯ ಎಸ ಬಿ, ಸಂಶೋಧನಾ ಡೀನ್ ಡಾ. ಗುರುರಾಜ್ ಹತ್ತಿ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.